International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಗಂಗಾವತರಣ ಮತ್ತು ಗಂಗಾಮಾಯಿ ಕವಿತೆಗಳ ಸಾಮ್ಯತೆಯ ಒಳನೋಟಗಳು

**ಡಾ.ಮುಮ್ತಾಜ್ ಬೇಗಂ. ಗಂಗಾವತಿ**

ಸಹ ಪ್ರಾಧ್ಯಾಪಕರು ಮತ್ತು ಸಂಯೋಜಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ
ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಂಗಾವತಿ, ಜಿ:ಕೊಪ್ಪಳ

ಶಬ್ದಗಾರುಡಿಗ ದ.ರಾ.ಬೇಂದ್ರೆ ಮತ್ತು ಶಿಖರಸೂರ್ಯ ಚಂದ್ರಶೇಖರ ಕಂಬಾರರು ಕನ್ನಡ ಕಾವ್ಯಲೋಕದ ಶ್ರೇಷ್ಠರು. ಬೇಂದ್ರೆ ಮಹಾಕವಿ, ಶಿವಪುರದ ಕನಸುಗಾರ ಕಂಬಾರರು ಕನ್ನಡ ಸಾಹಿತ್ಯ ಕಂಡ ಮೇರು ಕವಿಗಳು. ಕನ್ನಡ ಕಾವ್ಯಕ್ಕೊಂದು ಶೋಭೆ ತಂದುಕೊಟ್ಟ ಈ ಇಬ್ಬರು ಜಾನಪದ ಧಾಟಿಯ ಬರಹಗಾರರು. ಅವರ ಕವಿತೆಗಳ ನಾದ, ಮಾಧುರ್ಯ ಅಪಾರ. ಅವರು ಬರೆದ ಜಾನಪದ ಶೈಲಿಯ "ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ", "ಇಳಿದು ಬಾ ತಾಯಿ", "ಹಿಂದ ನೋಡದ ಗೆಳೆತಿ", "ಹೇಳತೇನಿ ಕೇಳ", "ನಾ ಕುಣಿಬೇಕ ಮೈ ಮಣೀಬೇಕ", "ಕಾಡು ಕುದುರೆ ಓಡಿ ಬಂದಿತ್ತಾ" ಇಂದಿಗೂ ಅನೇಕರ ಅತ್ಯಂತ ಪ್ರೀತಿ ಪಾತ್ರ ಕವನಗಳಾಗಿವೆ. ಈ ಇಬ್ಬರು ತಮ್ಮ ವಿಶಿಷ್ಟ ಜಾನಪದೀಯ ಶೈಲಿಯ ಮೂಲಕ ಧಾರವಾಡದ ಗಂಡು ಭಾಷೆಯನ್ನು ಕನ್ನಡ ಸಾಹಿತ್ಯಕ್ಕೆ ಹೊತ್ತು ತಂದವರು. ಜಾನಪದ ಶೈಲಿಯನ್ನು ಅದರಲ್ಲೂ ಧಾರವಾಡದ ಭಾಷೆಯನ್ನು ಬೇಂದ್ರೆಯವರ ನಂತರ ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡವರಲ್ಲಿ ಕಂಬಾರರು ಒಬ್ಬರು.

ಕೇವಲ ಭಾಷೆಯ ದೃಷ್ಟಿ ಅಷ್ಟೇ ಇವರ ನಡುವಿನ ಸಾಮ್ಯತೆಯಲ್ಲ. ಅದನ್ನು ಕಾವ್ಯಕ್ಕೂ ವಿಸ್ತರಿಸಬಹುದು. 'ಗಂಗೆ'ಯನ್ನು ಕೇಂದ್ರ ವಸ್ತುವಾಗಿಸಿಕೊಂಡು ಬರೆದ ಅವರ 'ಗಂಗಾವತರಣ' ಮತ್ತು 'ಗಂಗಾಮಾಯಿ' ಕವನಗಳೇ ಇದಕ್ಕೆ ಸಾಕ್ಷಿ. ಅವರಿಬ್ಬರ ಕಾವ್ಯದಲ್ಲಿ ಗಂಗೆಯ ರೂಪಕ, ಆಶಯ, ಅಭಿವ್ಯಕ್ತಿ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಎರಡು ಕವನಗಳಿಗೆ ಪುರಾಣವೆ ಮೂಲ ಆಕರ. ಬೇಂದ್ರೆಯವರ 'ಗಂಗಾವತರಣ'ಕ್ಕೆ ಪೌರಾಣಿಕ–ಆಧ್ಯಾತ್ಮಿಕ ನೆಲೆ ಮುಖ್ಯವಾದರೆ, ಕಂಬಾರರ 'ಗಂಗಾಮಾಯಿ'ಗೆ ಪುರಾಣವನ್ನು ಒಡೆದು ಹೊಸ ಪುರಾಣವನ್ನು ಕಟ್ಟ ಬಯಸುವ ಕವನ. ಬೇಂದ್ರೆಯವರದು ದೈವಿಕ ನೆಲೆಯಾದರೆ ಕಂಬಾರರದ್ದು ವಿಷಾದದ ನೆಲೆಯಾಗಿದೆ. ಈ ಇಬ್ಬರು ಗಂಗೆಯನ್ನೇ ಧ್ಯೇನಿಸಿದರೂ ಒಬ್ಬರದು ಪ್ರಾರ್ಥನೆ ಮತ್ತೊಬ್ಬರದು ಪುರಾಣ ಭಂಜಕ ವ್ಯಂಗ್ಯ.

ಬರಗಾಲದಿಂದ ಕಂಗೆಟ್ಟ ಸಮಯದಲ್ಲಿ ಗಂಗಾದೇವಿಯನ್ನು ಆಹ್ವಾನಿಸುವ ಬೇಂದ್ರೆಯವರ 'ಗಂಗಾವತರಣ'ದ ಪ್ರಾರ್ಥನೆಯು ಸಂಕೀರ್ಣವಾದ ಕವಿತೆಯಾಗಿದೆ. ಆದರೆ ಕಂಬಾರರ 'ಗಂಗಾಮಾಯಿ' 'ಹರಿಯುವುದಕ್ಕೆ ದಿಕ್ಕಿಲ್ಲ ನೀರು' ಇರುವ ಸ್ಥಿತಿಯನ್ನು ಹೇಳುವ ಕವಿತೆ. ಕಂಬಾರರ ಕಾವ್ಯ ದೃಷ್ಟಿಯಲ್ಲಿ 'ಗಂಗೆ' ಕೇವಲ ಭೌತಿಕ ಪ್ರವಾಹದವಳು. ಅದೇ ಬೇಂದ್ರೆಯವರ ಮನೋಲೋಕದಲ್ಲಿ ಧುಮ್ಮಿಕ್ಕುವ 'ಗಂಗೆ' ಪುಣ್ಯವಾಹಿನಿ, ಜ್ಞಾನದಾಯಿನ, ಸಸ್ಯಶ್ಯಾಮಲೆಯ ದೈವಿಕ ಭಾವ. ಹಾಗೆಂದೆ ಅವರು ಗಂಗೆಯನ್ನು ಆಹ್ವಾನಿಸುವ ಬಗೆ ಇದು.

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವದೇವರನು ತಣಿಸಿ ಬಾ
ದಗ್ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ

'ಗಂಗೆ' ಎಂದೊಡನೆ ನೆನಪಾಗುವುದೇ ಹರನ ಜಟಾ ಬಂಧನ. ಆ ಪುರಾಣ ಒಂದು ರೋಮಾಂಚನವೇ ಸರಿ. ಸಕಲ ಜೀವರಾಶಿಗೆ ಪೋಷಕವಾದ ಗಂಗೆ ಬೇಂದ್ರೆಯವರಿಗೆ ಮಾತೃರೂಪಿಣಿ. ಅದಕ್ಕಾಗಿ ಆ ಮಾತೃರೂಪಿಣಿಯನ್ನು ಧರೆಗಿಳಿಸಲು ನಾನಾ ಬಗೆಯಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತಾರೆ.

ಮತ್ತೊಂದು ಕಡೆ ಪರಿಚಿತ ಪುರಾಣವನ್ನು ಮುರಿದು ಕಟ್ಟಲು ಹವಣಿಸುವ ಕಂಬಾರರ 'ಗಂಗಾಮಾಯಿ'. ಈ ಗಂಗಾಮಾಯಿ ಇರುವ ಜಾಗವಾದರೂ ಎಂತಹದ್ದು. ಕೆಂಪಾನೆ ಕೆಂಪುಗುಡ್ಡ, ಬೆಳ್ಳಾನೆ ಬಿಳಿಗುಡ್ಡದ ನಡುವೆ ಒಳ ಹೊಕ್ಕರೆ ಹೊರಬರದಂತ ಏಳು ಸುತ್ತಿನ ಕೋಟೆ. ಆದರೂ ಅಲ್ಲಿ ಸೂಕರದಿಂದ ಸೊಳ್ಳೆಯವರೆಗೆ ಜೀವಿಸುವ ವೈವಿಧ್ಯಮಯವಾದ ಜೀವರಾಶಿಯ ಜೀವನವಿದೆ. ಈ ಜೀವನವನ್ನು ವರ್ಣಿಸುವಾಗಲೂ ಇದು ಬದುಕಲ್ಲ ಎಂಬ ವಿಷಾದವೂ ಇದೆ. ಅರ್ಥಹೀನ, ಜಡ, ನಿಶ್ಚಲ ಬದುಕು ಗಂಗಾಮಾಯಿ ಆಶ್ರಯದಲ್ಲಿದೆಯಲ್ಲ ಎಂಬುದೇ ಅದು. ಈ ಭಾವದ ಕಾರಣದಿಂದಲೋ ಏನೋ ಈಗಾಗಲೇ ಪುರಾಣಗಳಲ್ಲಿ 'ಗಂಗೆ' ಎಂಬ ಮಾನಸಿಕ ಪ್ರತಿಮೆಯಿಂದ ಮೂಡಿರುವ ಪವಿತ್ರ ಭಾವಗಳು ಗಂಗಾಮಾಯಿ ಕೆರೆಯಲ್ಲಿ ಭಂಗಗೊಳ್ಳುತ್ತವೆ. ಈ ಎರಡು ಕವನಗಳ ಆಶಯವನ್ನು ಗಮನಿಸಿದಾಗ ನವೋದಯ ಮತ್ತು ನವ್ಯ ಕಾವ್ಯ ಧಾರೆಯ ಭಿನ್ನತೆಗಳನ್ನು ಇಲ್ಲಿ ಕಾಣುತ್ತೇವೆ. ನವೋದಯದ ಆಧ್ಯಾತ್ಮ, ಪ್ರಕೃತಿ ಪ್ರೇಮ, ನವ್ಯದ ವ್ಯಂಗ್ಯ, ವಿಮರ್ಶೆಗಳು ಹೇಗೆ ಪ್ರಭಾವಿಸಿವೆ ಎಂಬುದು ಸ್ಪಷ್ಟವಾಗುತ್ತದೆ.

ಬೇಂದ್ರೆ ಮತ್ತು ಕಂಬಾರರ ಕೆಲವು ಕವನಗಳಲ್ಲಿಯೂ ಈ ಸಂಬಂಧವನ್ನು ಹೊಂದಿವೆ. ಬೇಂದ್ರೆಯವರ 'ಜೋಗಿ' ಕವನದ ಆಶಯವನ್ನು 'ಗಂಗಾಮಾಯಿ' ಕವನದ ಆರಂಭದ ನಿರೂಪಣೆಯಲ್ಲಿ ಕಾಣುತ್ತದೆ. 'ಜೋಗಿ' ಪರಿಪೂರ್ಣತೆಗಾಗಿ ಹಂಬಲಿಸಿ ಹಾತೊರೆಯುವುದನ್ನು ಹಿಡಿದಿಟ್ಟರೆ ಗಂಗಾಮಾಯಿ ವಾಸ್ತವದ ಸ್ಥಿತಿಯನ್ನು ಪರಾಮರ್ಶಿಸಲು ತೊಡಗುತ್ತದೆ. ಒಂದರಲ್ಲಿ ಮೀರಿ ಹಾರುವ ಅಪೇಕ್ಷೆ ಕಂಡರೆ ಮತ್ತೊಂದರಲ್ಲಿ ಮಗ್ನವಾಗಿ ಅರಿಯುವ ಆಸೆ ಕಾಣುತ್ತದೆ. 'ಜೋಗಿ' ಕವನಕ್ಕಿಂತ 'ಗಂಗಾವತರಣ' ಕವನದೊಂದಿಗೆ ಹೋಲಿಸಿದಾಗ ಈ ಮಾತು ಮತ್ತಷ್ಟು ಸ್ಪಷ್ಟವಾಗುತ್ತದೆ. ಗಂಗಾಮಾಯಿ ಸಣ್ಣ ಹಳ್ಳಿಯೊಂದರ ಕೆರೆ. ಇಲ್ಲಿನ ಸ್ಥಳೀಯ ವಿವರಗಳು ಕವನವನ್ನು ವ್ಯಾಪಕವಾಗಿಸುತ್ತವೆ, ದೇಶದ ಸಂಸ್ಕೃತಿಯ ವ್ಯಾಖ್ಯಾನವನ್ನಾಗಿಸುತ್ತವೆ.

ಇಬ್ಬರು ಕವಿಗಳ ಕಲ್ಪನೆಯಲ್ಲಿ 'ಗಂಗೆ' ಒಂದೇ ತೆರನಾಗಿದ್ದಾಗಲೂ ಕಾವ್ಯಧಾರೆಯಲ್ಲಿ ಮಾತ್ರ ಕವಲಾಗಿ ಹರಿಯುತ್ತಾಳೆ. ಬೇಂದ್ರೆಯ ಗಂಗೆ ಸ್ವರ್ಗಲೋಕ ತೊರೆದು ಬಯಲಲ್ಲಿ ಹರಿಯುವ ಚಲನಶೀಲಳು, ಕಂಬಾರರ 'ಗಂಗೆ' ನಿಶ್ಚಲವಾಗಿದ್ದು

ಜಡವಾದವಳು. ಸ್ವರ್ಗವನ್ನು ತೊರೆವ ಬೇಂದ್ರೆಯವರ ಗಂಗೆಗೆ ಧರೆಯೇ ಗಮ್ಯ. ಧರೆಯಲ್ಲಿರುವ ಕಂಬಾರರ ಗಂಗೆ ಮಾತ್ರ ನಿಶ್ಚಲ. ಗಂಗಾವತರಣದಲ್ಲಿ ಸ್ವರ್ಗದಿಂದ ಧರೆಗಿಳಿಯುವಾಗ ವ್ಯೋಮವ್ಯಾಪಿ, ಅಷ್ಟದಿಕ್ಕುಗಳಿಗೆ ನೀರಿನ ಸೇಚನೆ ಮಾಡುವವಳು ಈ ಗಂಗೆ. ಮಳೆಯ ರೂಪದ ಸೇಚನೆಯಿಂದಾಗಿ ಇಡೀ ಪ್ರಕೃತಿಯು ನೀರುಣ್ಣುವುದು. ಅದನ್ನೇ ಕವಿ 'ಚರಾಚರಗಳಿಗೆ ಉಣಿಸಿ ಬಾ' ಎಂದು ಬಣ್ಣಿಸುವುದು. ಆದರೆ ಗಂಗಾಮಾಯಿ ಒಂದು ಊರ ಕೆರೆ ಹೆಸರು. 'ಕೆರೆ' ಎಂಬ ಈ ಪ್ರತಿಮೆಯೇ ಜಡಾವಸ್ಥೆಯನ್ನು ಧ್ವನಿಸುವಂತಹದ್ದು. ಚಲಿಸಬೇಕಾದ ಗಂಗೆ 'ಕೆರೆ'ಯಾಗಿ ಅಥವಾ 'ಕೆರೆ'ಯಲ್ಲಿ ಸ್ಥಗಿತಗೊಂಡ ಸ್ಥಿತಿಯನ್ನು ಸಂಕೇತಿಸುತ್ತದೆ. ಪಾಪಗಳನ್ನು ತೊಳೆಯುವ ಗಂಗೆ ಚಲಿಸಲಾಗದೆ ಮಡುಗಟ್ಟಿ ಪಾಪಗಳ ಆಗರವೇ ಆದ ಜಡ ಸ್ಥಿತಿಯನ್ನು 'ಗಂಗಾಮಾಯಿ' ಕಟ್ಟಿಕೊಡುತ್ತದೆ. ಗಂಗಾಮಾಯಿಯ ಒಡಲಿನಲ್ಲಿ ನಡೆಯುವ ದಿನನಿತ್ಯ ಕ್ರಿಯಾಕರ್ಮದಿಗಳು, ಘಟನೆಗಳಿಂದ 'ಗಂಗೆ' ಮಲೀನಗೊಂಡ ಚಿತ್ರಣವನ್ನು ನೀಡುತ್ತದೆ. ಆ ಮೂಲಕ ಸ್ಥಳೀಯ ಸಂಸ್ಕೃತಿಯ ಕಲುಷಿತತೆಗಳನ್ನು ಎದುರುಗೊಳ್ಳುವುದೇ ಗಂಗಾಮಾಯಿ ಕವಿತೆಯ ಅನನ್ಯತೆ. ಇಲ್ಲಿ ಕವಿ ಮತ್ತು ಸಹೃದಯರಿಗೆ ಎಲ್ಲ ಬಗೆಯ ಪಾಪ ಕೊಳೆಗಳನ್ನು ತೊಳೆದು ಶುಚಿಗೊಳಿಸಬೇಕಾದ ಗಂಗೆಯೇ ಜಡವಾಗಿ ಕೊಳೆತು ಹೀನಾವಸ್ಥೆಗೆ ತಲುಪಿದುದರ ಬಗೆಗೆ ವಿಷಾದ ಮತ್ತು ವ್ಯಂಗ್ಯ ಏಕಕಾಲದಲ್ಲಿ ಪ್ರಕಟವಾಗುತ್ತವೆ. ಇದು ಮಡುಗಟ್ಟಿದ ತಮಂಧ ಮತ್ತು ಪರಂಪರೆಯ ಮೌಲ್ಯಗಳನ್ನು ಹಿಡಿದಿಡಲು ಕಂಬಾರರ ಸಂವೇದನೆ ಕಂಡುಕೊಂಡಿರುವ ರೂಪಕ, ಪ್ರತಿಮೆಗಳು ಸಹೃದಯರನ್ನು ದಿಗ್ಭ್ರಾಂತರನ್ನಾಗಿಸುತ್ತವೆ. ಒಂದು ಪ್ರತಿಭಾವಂತ ಸಂವೇದನೆ ಏನೆಲ್ಲ ಬಗೆಯಬಹುದೋ ಅದೆಲ್ಲವನ್ನು ಗಂಗಾಮಾಯಿ ಪ್ರತಿಮೆ ತನ್ನಲ್ಲಿ ಇರಿಸಿಕೊಂಡಿರುವುದರಿಂದಲೇ ಕಂಬಾರರು ಮತ್ತೆ ಮತ್ತೆ ಪುರಾಣಗಳ ಮರುಸೃಷ್ಟಿಗೆ ತೊಡಗುತ್ತಾರೆ. ಅವರ 'ಹೇಳತೇನ ಕೇಳ' ಕವಿತೆ, 'ಋಷ್ಯಶೃಂಗ', 'ಹುಲಿ ನೆರಳು' ನಾಟಕ, 'ಕರಿಮಾಯಿ'ಯಂತಹ ಕಾದಂಬರಿಗಳಲ್ಲಿಯೂ ಭಿನ್ನ ಆಯಾಮಗಳ ಪುರಾಣ ವಿಶ್ಲೇಷಣೆ ಇದೆ.

'ಮೂಡಣದ ಮುದಿಕುರುವೊಡೆದುನೆತ್ತರು ಕೀವು ಸೋರುತೋ ಸುರುವಾಯ್ತಿಲ್ಲಿ ಚಲನೆ' ಬೆಳಗಾದೊಡನೆ ಗಂಗಾಮಾಯಿ ಕೆರೆಯ ದಡದಲ್ಲಿ ಚರಾಚರಗಳ ಬದುಕಿನ ಚಲನೆ ಸುರುವಾಗುವುದರ ಚಿತ್ರವಿದೆ. ಈ ಬೆಳಗಿನ ವರ್ಣನೆ ಕನ್ನಡ ನವೋದಯ ಕವಿತೆಗಳಲ್ಲಿ ಬರುವ ಸೂರ್ಯೋದಯದ ಸೌಂದರ್ಯದ ವರ್ಣನೆಗೆ ಪ್ರತಿರೋಧವೆಂಬಂತಿದೆ. ಇದು ಕುವೆಂಪು ಅವರ 'ಬಾದ್ರಪದ ಸುಪ್ರಭಾತ' ಮತ್ತು ಬೇಂದ್ರೆ ಅವರ 'ಬೆಳಗು' ಅಲ್ಲ. ಬಹುಮುಖ್ಯವಾಗಿ ಕಂಬಾರರ ಗಂಗಾಮಾಯಿಯಲ್ಲಿರುವುದು ಸೌಂದರ್ಯದ ವರ್ಣನೆಯೇ ಅಲ್ಲ. ಇಲ್ಲಿ ಪವಿತ್ರ ಪ್ರತಿಮೆಯ ಪುರಾಣವಾದ ಗಂಗೆ ಮನುಷ್ಯನ ನಿತ್ಯ ಬದುಕಿನ ಬಳಕೆಯ ಭಾಗವಾಗಿರುವುದರ ಚಿತ್ರಣವಿದೆ. ಬೇಂದ್ರೆಯವರ ಗಂಗಾದೇವಿಯ ಪಾರಮಾರ್ಥಿಕ ಸ್ವರೂಪವನ್ನು ಬಣ್ಣಿಸುವಾಗಲೂ ಮನುಷ್ಯ ಬದುಕಿನ ದಿನನಿತ್ಯದ ಅಗತ್ಯಗಳಿಗೆ ಒದಗುವ ನೀರು ಅಷ್ಟೇ ಆಗಿದ್ದರೂ ಕಂಡದ್ದರ ಮಂಡನೆಯಾಗಿದೆ. ಈ ಕವನಗಳು ಮಂಡಿಸುವ ವಿಚಾರಗಳಲ್ಲಿನ ಚಲನೆ ಮತ್ತು ಜಡತೆಯ ನಡುವೆಯೂ ನಿರಂತರವಾಗಿ ಬದುಕು ಸಾಗಿದೆ.

ಈ ಎರಡು ಕವನಗಳಲ್ಲಿ ಬರುವ ಸಮಸ್ಯೆ ಒಂದಿದೆ. ಅದು ಕವನಗಳ ಉದ್ದಕ್ಕೂ ಬಳಕೆಯಾಗಿರುವ ಧ್ವನಿಗಳ ವೈವಿಧ್ಯದ್ದು ಮತ್ತು ವೈರುಧ್ಯದ್ದು.

ಕೊಳೆಯ ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ಹೀಗೆ ಮಾಡದಿರು, ಅಲ್ಲ ಬಾ (ಗಂಗಾವತರಣ)

ಹೇಲುಚ್ಚೆಗೆ, ಬೋಳಿಯರ ಮಡಿ ಒದ್ದೆಗೆ
ಭಟ್ಟರಾಚಮನಕ್ಕೆ, ಅದಕ್ಕೆ, ಇದಕ್ಕೆ, ಎದಕ್ಕು

ಒಟ್ಟ ಖರ್ಚಾದ ಕೆರೆ ನೀರು ಬಚ್ಚಲದಿಳಿಜಾರಿನಗುಂಟ ಹರಿದು
ಕೆರೆಗೇ ಸೇರುವ ದಿನನಿತ್ಯದ ವ್ಯವಹಾರ, ಈ ಕೆರೆಯ ಚಮತ್ಕಾರ (ಗಂಗಾಮಾಯಿ)

ಭೌತಿಕ ಕೊಳೆಯೇ ಆಗಲಿ, ಅಜ್ಞಾನದ ಕೊಳೆಯೇ ಆಗಲಿ, ನೈತಿಕ ಕೊಳೆಯೇ ಆಗಲಿ ಯಾವುದೇ ಕೊಳೆ ಇರಲಿ ಅದನ್ನು ತೊಳೆಯುವವಳು ಗಂಗೆ. ಇದು ಅವಳಿಂದ ಮಾತ್ರ ಸಾಧ್ಯ. ಅದು ಅವಳ ಕರ್ತವ್ಯವೂ ಹೌದು ಎನ್ನುವ ಬೇಂದ್ರೆಯವರ ಗಂಗಾವತರಣ. ಕಂಬಾರರ ಗಂಗಾಮಾಯಿ ಜನತೆಯ ತಮ್ಮ ನಿತ್ಯ ಬದುಕಿನ ಜಂಜಾಟದಲ್ಲಿ ಎಲ್ಲವನ್ನು, ಎಲ್ಲರನ್ನೂ ಒಳಗೊಳ್ಳುವ ವ್ಯಂಗ್ಯವಿದೆ. ಈ ವ್ಯಂಗ್ಯ ಕೇವಲ ಏಕಮುಖವಾದ ವ್ಯಂಗ್ಯವಲ್ಲ. ಜೀವನದ ಬಗೆಗೆ ಕಟುವಾದ ಟೀಕೆಯಿದೆ. ಗಂಗೆಗೆ ಜೀವನದಲ್ಲಿನ ಯಾವುದರ ಬಗೆಗೂ ನಿರಾಕರಣೆ ಇರುವುದಿಲ್ಲ, ನಿರಾಕರಿಸುವುದೂ ಇಲ್ಲ. ಒಪ್ಪುತ್ತಾಳೆ, ಒಪ್ಪಿ ಅಪ್ಪುತ್ತಾಳೆ ಎನ್ನುವುದನ್ನು ಗ್ರಹಿಸುವ ಕವಿಗೆ ಅಸಹ್ಯವೂ ಇದೆ, ವಿಷಾದವೂ ಇದೆ, ಇವುಗಳಿಂದ ಹುಟ್ಟಿರುವುದೇ ವ್ಯಂಗ್ಯ.

ಕವಿಗಳ ಮನಸ್ಸಿನಲ್ಲಿ ಪುಣ್ಯ ಪ್ರತಿಮೆಯಾದ ಗಂಗೆಯ ರೂಪವಾದರೂ ಎಂತಹದ್ದು! 'ಕೆಳಗಿಳಿದು ಬಾ ತಾಯಿ' ಎನ್ನುವಾಗ ಅದು ಅಧಃಪತನವಲ್ಲ, ಬದಲಾಗಿ ಅವತರಣ. ಪತನವೆಂದರೆ ಅಧೋಗತಿಗೆ ಇಳಿಯುವುದು. 'ಧುಮ್ ಧುಮ್' ಎಂದು ಧುಮ್ಮಿಕ್ಕುವುದನ್ನು ಪತನವೆನ್ನುವುದಿಲ್ಲ; ಜಲಪಾತವೆನ್ನುತ್ತಾರೆ. ಅಂತೆಯೇ ಗಂಗೆ ಧರೆಗಿಳಿಯುವುದು ಪತನವಲ್ಲ; ಗಂಗಾಪಾತ. ಅದುವೇ ಗಂಗಾವತರಣ. ಇಲ್ಲಿ ಅವತರಣವೆಂದರೆ ಅದು ಅವತಾರವಲ್ಲ ಗಂಗೆ ಧರೆಗಿಳಿಯುವುದು ಸ್ವಸ್ವರೂಪದಲ್ಲಿ. ಹಾಗಾಗಿ ಇದು ಸ್ವಸ್ವರೂಪದ ಅವತರಣ. ಗಂಗಾವತರಣ ಎಂದು ಬೇಂದ್ರೆಯವರು ಹೇಳುತ್ತಾರೆ.

ಹರಣ ಹೊಸದಾಗೆ ಹೊಳೆದು ಬಾ
    ಬಾಳು ಬೆಳಕಾಗೆ ಬೆಳೆದು ಬಾ
    ಮೈ ತಳೆದು ಬಾ
    ಕೈ ತೊಳೆದು ಬಾ

ಅವಳು ಹರಿದಲ್ಲೆಲ್ಲ ಚರಾಚರಗಳು ಹೊಸದಾಗುತ್ತವೆ, ಹಸಿರಾಗುತ್ತವೆ, ಉಸಿರಾಡುತ್ತವೆ, ಹೊಸ ಜನ್ಮಪಡೆಯುತ್ತವೆ, ಜೀವಕ್ಕಂಟಿದ ಕಲ್ಮಶಗಳಿಗೆಲ್ಲ ತೊಳೆದು, ಅಳಿದು ಬಾಳಿನಲ್ಲಿ ಹೊಸತನ ಮೂಡುತ್ತದೆಂದೆ 'ಇಳೆಗಿಳಿದು ಬಾ ತಾಯಿ ಇಳಿದು ಬಾ' ಎಂದು ಕವಿ ಪ್ರಾರ್ಥಿಸುತ್ತಾರೆ. ಇದು ಕವಿಯೊಬ್ಬನ ವೈಯಕ್ತಿಕ ನೆಲೆಯ ಪ್ರಾರ್ಥನೆ ಎನಿಸಿದರೂ, ನಾಡಿನಲ್ಲಿ ಎಲ್ಲರ ಕರೆಯನ್ನು ಒಳಗೊಳ್ಳುತ್ತದೆ. ಅದರೂ ಅದು ಚಲನೆಯನ್ನು ಕಳೆದುಕೊಂಡು ಕೇವಲ ಬಿನ್ನಪವಾಗಿಯೇ ಉಳಿದು ಬಿಡುತ್ತದೆ. ಗಂಗೆ ನಿತ್ಯ ಬದುಕಿನ ಭಾಗವಾಗಿದ್ದರೂ ಸಹ ಓದುಗರಿಗೆ ಸ್ವರ್ಗ ಮತ್ತು ಇಳೆಯ ನಡುವೆಯಷ್ಟೇ ಬೇಂದ್ರೆಯವರ ಗಂಗೆ ಸಿಗುವುದು.

ಗಂಗಾಮಾಯಿ ಹಾಗಲ್ಲ ಅವಳು ನಿತ್ಯ ಬದುಕಿನಲ್ಲಿ ಜೀವಂತ ನಂಬಿಕೆಯಾಗುತ್ತಾಳೆ, ಹಳ್ಳಿಯ ಹಾರುವರಲ್ಲಿ ಪುರಾಣವಾಗುತ್ತಾಳೆ, ಸ್ಥಳೀಯವಾಗಿ ಉಳಿಯದೆ ವಿಶ್ವವ್ಯಾಪಿಯಾಗುತ್ತಾಳೆ. ಎಲ್ಲವನ್ನು ಒಳಗೊಂಡು, ಅರಗಿಸಿಕೊಂಡು ಹೊಸ ಪುರಾಣವಾಗುತ್ತಾ ಬೆಳೆಯುತ್ತಾಳೆ. ಅವಳಲ್ಲಿ ಒಂದು ಜೀವಂತ ಚಲನೆಯಿದೆ. ಕನ್ನಡದ ಕಥನ, ಕಾವ್ಯಗಳು ಪುರಾಣಗಳನ್ನು ಆಕರವಾಗಿ ಬಳಸಿಕೊಂಡದ್ದಿದೆ, ಕವಿತೆಗಳಿಗೆ ರೂಪಕಗಳನ್ನಾಗಿಯೂ ಉಪಯೋಗಿಸಿಕೊಂಡದ್ದೂ ಇದೆ. ಕಂಬಾರರ ಈ ಕವಿತೆಗೆ ಸದ್ಯದ ಬದುಕನ್ನು ಪುರಾಣಗೊಳಿಸುವ ಆಕಾಂಕ್ಷೆಯಿದೆ. ನಮ್ಮಪ್ಪ ಬೀರಪ್ಪ, ಹಡೆದವ್ವ

International Journal for Multidisciplinary Research (IJFMR)

E-ISSN: 2582-2160 ● Website: www.ijfmr.com ● Email: editor@ijfmr.com

ಕರ್ರೆವ್ವ, ಹಾದರದ ಕೂಸುಗಳು, ಪುಕ್ಕರು, ಗೋರಿಗೆ ದಿಕ್ಕಿಲ್ಲದವರು, ಬೆಂಕಿಯ ರಿಣವಿರದವರು ಎಲ್ಲರನ್ನು ಒಳಗೊಂಡು 'ಹೊಸೆದ' ಹೊಸ ತೋಂಡಿ ಪುರಾಣವೇ ಆಗುತ್ತಾಳೆ ಗಂಗಾಮಾಯಿ. ಇದು ಕವಿಗೆ ಅಗತ್ಯವಾದ ಪುರಾಣ ನಿರ್ಮಾಣಾಸಕ್ತಿಯನ್ನು ಒದಗಿಸುವ ಕಾರಣದಿಂದ ವಿಶಿಷ್ಟವಾಗಿ ಕಾಣುತ್ತಾಳೆ.

ಬಹಳ ಮುಖ್ಯವಾಗಿ ಈ ಎರಡು ಕವಿತೆಗಳು ಬೆಳೆದ ಬಗೆಯನ್ನು ಸಹೃದಯರು ಗಮನಿಸಬೇಕು. ಗಂಗಾವತರಣದ ಮೊದಲ ನಾಲ್ಕು ನುಡಿಗಳಲ್ಲಿ ಗಂಗೆಯ ಪ್ರಾರ್ಥನೆಯಿದೆ, ಗಂಗಾಮಾಯಿಯಲ್ಲಿ ಕೆರೆಯ ಪರಿಸರದ ಪರಿಚಯವಿದೆ. ನಂತರದ ಎರಡು ನುಡಿಗಳಲ್ಲಿ ಗಂಗೆಯ ಮಮತೆ ಮತ್ತು ಶಕ್ತಿಯ ವರ್ಣನೆಯಿದ್ದರೆ, ಗಂಗಾಮಾಯಿ ತಟದಲ್ಲಿನ ಜೀವನ ಕ್ರಮದ ವಿವರವಿದೆ. ಮೂರನೆಯ ನುಡಿಯಲ್ಲಿ ಅವಳ ದೈವತ್ವದ ವರ್ಣನೆ ಕಂಡರೆ, ಗಂಗಾಮಾಯಿಯ ಕೊನೆಯ ಮೂರು ನುಡಿಗಳಲ್ಲಿ ಕವಿಗೆ ಮಾತ್ರ ತೋಂಡಿಯ ದರ್ಶನವಿದೆ. ಅದು ಹೊಸದೊಂದು ಪುರಾಣ ಕಥೆಯನ್ನು 'ಹೊಸೆದು'ಕೊಳ್ಳುತ್ತದೆ. ಗಂಗಾವತರಣದ ಕೊನೆಯ ನುಡಿಗಳಲ್ಲಿ ಪ್ರಕೃತಿ ಹೊಸ ಜೀವ ತುಂಬಿಕೊಳ್ಳುವುದೆನ್ನುವ ಭರವಸೆಯಿದೆ.

**ಆಕರಗಳು ಗ್ರಂಥಗಳು**

1. ಗಂಗಾವತರಣ, ಅಂಬಿಕಾತನಯದತ್ತ, ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ, 1951
2. ಬೆಳ್ಳಿ ಮೀನು, ಡಾ.ಚಂದ್ರಶೇಖರ ಕಂಬಾರ, ಅಭಿನವ ಪ್ರಕಾಶನ ಮೈಸೂರು, 1989
3. ಹೇಳತೇನ ಕೇಳ, ಡಾ.ಚಂದ್ರಶೇಖರ ಕಂಬಾರ, ಅಕ್ಷರ ಪ್ರಕಾಶನ, 1964